ಸಂಸ್ಕೃತಿ ಚಿಂತಕರಾದ ನೆಲ್ಲುಕುಂಟೆ ವೆಂಕಟೇಶ್ ಅವರು ತಮ್ಮ ಸಂಶೋಧನಾ ಬರಹಗಳ ಮೂಲಕ ಸಾಹಿತ್ಯವಲಯದಲ್ಲಿ ಗುರುತಿಸಿಕೊಂಡವರು. ಕಾವ್ಯ ಮತ್ತು ಸಂಶೋಧನೆ ಅವರು ಆಯ್ದುಕೊಂಡ ಕ್ಷೇತ್ರಗಳು. ಹುಟ್ಟೂರು ಚಿಕ್ಕಬಳ್ಳಾಪುರ, ಪ್ರಸ್ತುತ ಬೆಂಗಳೂರು ನಿವಾಸಿ.

ಸಂಕೇತ ಎಂದು ಅವರು ಭಾವಿಸಿರಬಹುದು. ಆದರೆ, ಸುವಾಸನೆಯಲ್ಲಿ ಮಾತ್ರ ರಸಪುರಿಯನ್ನು ಮೀರಿಸುವ ಹಣ್ಣನ್ನು ನಾನು ನೋಡಿಲ್ಲ.

ಮ್ಯಾಂಗೊ ಎಂದು ಎಲ್ಲ ತಳಿಗಳನ್ನು ಒಂದೆ ಬುಟ್ಟಿಗೆ ಹಾಕಲು ಸಾಧ್ಯವಿಲ್ಲ. ಸುಮಾರು 1500 ಕ್ಕೂ ಹೆಚ್ಚು ತಳಿಗಳಿರುವ ಭಾರತದಲ್ಲಿ 20 ರಷ್ಟು ತಳಿಗಳು ಮಾತ್ರ ಅಪಾರ ಜನಪ್ರಿಯತೆ ಗಳಿಸಿವೆ. ಇಂಗ್ಲಿಷರಿಗೆ ಮಾವಿನ ವೈಭವದ ಪರಿಚಯ ಕಡಿಮೆ ಇದ್ದಿರಬಹುದು. ಮಾವಿನ ತವರು ಭಾರತ. ಹಲಸೂ ಕೂಡ ಇಲ್ಲೆ ಹುಟ್ಟಿದ್ದು ಎಂಬ ದಾಖಲೆಗಳಿವೆ. ಮಾವಿನ ವೈಜ್ಞಾನಿಕ ಹೆಸರೆ 'ಮ್ಯಾಂಜಿಫೆರಾ ಇಂಡಿಕಾ' ಎಂದು. ಆಶ್ಚರ್ಯವೆಂದರೆ ಕಿತ್ತಳೆ ಕೂಡ ನಮ್ಮಲ್ಲೆ ವಿಕಾಸವಾಗಿದೆ. ಅದಕ್ಕೂ ಏನೊ ನಾವು ತುಸು ಹೆಚ್ಚೆ ಹುಳಿ, ಉಪ್ಪು ಖಾರದ ಜನ. ಜೊತೆಗೆ ಮಾವಿನ ಚಿಟಿಕೆಯಷ್ಟು ಹುಳಿ ಬೊಗಸೆಯಷ್ಟು ಸಿಹಿ ಸೇರಿ ಬದುಕು ಸಂಭ್ರಮದ್ದಾಗಬೇಕಾಗಿತ್ತು. ಜನಪೀಡನೆಯು ಅವರನ್ನು ನೆಮ್ಮದಿಯಾಗಿರಲು ಬಿಡುತ್ತಿಲ್ಲ. ಬಿಜಿಎಲ್ ಸ್ವಾಮಿಯವರು, 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಎಂಬ ಪುಸ್ತಕ ಬರೆದರು. ಅದರಲ್ಲಿ ಯಾವ ಯಾವ ತರಕಾರಿ, ಹಣ್ಣು, ಗಡ್ಡೆ ಗೆಣಸುಗಳು ಅಲ್ಲಿಂದ ಇಲ್ಲಿಗೆ ಬಂದವು ಎಂದು ಬರೆದರು. ಇಲ್ಲಿಂದ ಅಲ್ಲಿಗೆ ಹೋದ ಮಾವು ಮುಂತಾದವುಗಳ ಕುರಿತು ಅವರ ಅಭಿಪ್ರಾಯಗಳೇನೆಂದು ಯಾರಾದರೂ ದಾಖಲಿಸಬೇಕಾಗಿದೆ.

ತಮಿಳಿನ ಮಾಂಗಾಯಿ, ಕನ್ನಡದ ಮಾಂಕಾಯಿ, ಮಾವಿನ್ಕಾಯಿ, ತೆಲುಗಿನ ಮಾಮಿಡಿ ಕಾಯಿಗಳೆ ಇಂಗ್ಲಿಷಿನ ಮ್ಯಾಂಗೊ ಹೆಸರಿನ ಹಿಂದೆ ಇರುವುದು. ಆಮ್ರ, ಆಮ್‌ಗಳಿಗೂ ಮಾವಿನ ನಾಮಕರಣಕ್ಕೂ ಸಂಬಂಧವಿದೆ. ಅಮ್ಮ ಎಂಬುದು ಮಾ ಆದಂತೆ, ಮಾವು ಆಮ್ ಆಯಿತೇನೊ!

ಸುಮಾರು 2.5 ಕೋಟಿ ವರ್ಷಗಳ ಹಿಂದೆ ಹುಟ್ಟಿ ವಿಕಾಸಗೊಂಡ ಈ ಮರವನ್ನು ನಮ್ಮ ಪೂರ್ವಜರು ಸುಮಾರು 4500 ವರ್ಷಗಳ ಹಿಂದೆ ತಮ್ಮ ಹೊಲಗಳ ಬದುಗಳಿಗೆ, ಹಿತ್ತಿಲಿಗೆ ತಂದು ನೆಟ್ಟು ಪೋಷಿಸಿ ಸಂಭ್ರಮಿಸಿದರು. ಬಹುಶಃ ಗಂಡಿಗಿಂತ ಹೆಣ್ಣೆ ಹೆಚ್ಚು ಖುಷಿ ಪಟ್ಟಿರಬಹುದೇನೊ. ಮಿಡಿ ಮಾವಿನಿಂದ ಹಣ್ಣಾದ ಮಾವಿನವರೆಗೆ ಅದೆಷ್ಟು ಥರದ ಭಕ್ಷ್ಯ ಭೋಜನಗಳನ್ನು ಹೆಂಗಸರು ಸಿದ್ಧ ಪಡಿಸುತ್ತಾರೆ! ಹೆಣ್ಣು ಮಕ್ಕಳೇನಾದರೂ ಕಾವ್ಯ, ಕಥೆಗಳನ್ನು ಬರೆದಿದ್ದರೆ ಮಾವಿನ ಮೋಹಕ ಲೋಕವನ್ನು ವಿವರಿಸುತ್ತಿದ್ದರೇನೊ! ಆದರೆ, ಗಂಡು ಕವಿಗಳು, ಲೇಖಕರು ಮಾವಿನ ಬಗ್ಗೆ ಅಸೀಮ ನಿರ್ಲಕ್ಷ್ಯ ತೋರಿದ್ದಾರೆ. ಪಂಪನಂಥ ಕವಿ ಮಹಾ ಮಾವಿನ ಪ್ರೇಮಿ ಎಂಬ ಉತ್ಪ್ರೇಕ್ಷೆಗಳಿವೆ. ಆದರೆ, ಪಂಪ, ಲಕ್ಷ್ಮೀಶರು ಹೂ ಬಿಟ್ಟ ಮಾವಿನ ಸೊಬಗನ್ನು ವರ್ಣಿಸಿದ್ದಾರೆಯೇ ಹೊರತು, ಕಾಯಿ ತೊಟ್ಟು ಹಣ್ಣಾದ ಮರಗಳ ಉಲ್ಲೇಖಗಳು ಇಲ್ಲವೆನ್ನುವಷ್ಟು ಕಡಿಮೆ. ಆರ್ಯರು ಹೊರಗಿನಿಂದ ಬಂದವರಲ್ಲ ಇಲ್ಲಿನವರೆ ಎಂದು ಶ್ರೀಕಾಂತ್ ತಾಳೆಗೇರಿ, ರಾವ್ ಮುಂತಾದವರು ಬರೆಯುತ್ತಾರೆ. ಆದರೆ, ಸುಮಾರು 3500 ವರ್ಷಗಳ ಆಸುಪಾಸಿನಲ್ಲಿ ರಚನೆಯಾದ ಋಗ್ವೇದದಲ್ಲಿ ಮಾವಿನ ಪ್ರಸ್ತಾಪವೇ ಇಲ್ಲ. ಹಾಗೆ ನೋಡಿದರೆ ಬೌದ್ಧರ ನಂತರ ಮಧ್ಯಕಾಲೀನ ಯುಗದಲ್ಲಿ ಭಾರತದ ಭಾಗವೇ ಆಗಿದ್ದ ಅಫ್ಘಾನಿಸ್ತಾನ, ಪಾಕಿಸ್ತಾನಗಳಿಂದ ಹಿಂದೂಸ್ತಾನಕ್ಕೆ ಬಂದ ಅರಸರು, ಆಡಳಿತಗಾರರು ಮಾವಿನ ಮೋಹಕ್ಕೆ ಮರುಳಾಗಿ ಸಂಪೂರ್ಣ ಶರಣಾದವರೇನೆ. ಬಾಬರನಂತೂ ಕಾಬೂಲಿನ ದ್ರಾಕ್ಷಿಯನ್ನೂ ಬಿಟ್ಟು ಮಾವನ್ನು ಸಂಭ್ರಮಿಸುತ್ತಾನೆ... ತಾನು ದಿಲ್ಲಿಯನ್ನು ಬಿಟ್ಟು ಹೋಗುವುದಿಲ್ಲವೆಂದು ನಿಂತುಬಿಡುತ್ತಾನೆಂದು ಲಂಕೇಶರು ಬರೆಯುತ್ತಾರೆ.

ಮೋಹಕ ಮಾವಿನ ಜೊತೆ ನನ್ನ ಬಾಲ್ಯ ವಿಕಾಸವಾಗಿದೆ. ಮಾವಿನ ಕಾಲ ಬೇಗ ಶುರುವಾಗಲಿ ಹಾಗೂ ಬೇಗ ಕೊನೆಯಾಗದಿರಲಿ ಎಂದು ಪ್ರಾರ್ಥಿಸಿಕೊಂಡೆ ಬೆಳೆದವನು ನಾನು. ಹೈಸ್ಕೂಲಿಗೆ ಮಾವು ಇಲ್ಲದ ಊರಿನ ಮಠಕ್ಕೆ ಸೇರಿಸಿದ್ದರು. ಮನೆ ಬಿಟ್ಟು ಹೊರಡುವಾಗ ಹಲಸು ಮತ್ತು ಮಾವಿನ ರಾಶಿ,